**ಭಾರತ ಮತ್ತು ಪಾಕಿಸ್ತಾನದ ನಡುವಿನ ಕೈದಿಗಳ ಪಟ್ಟಿಯ ವಿನಿಮಯ**

ಜನವರಿ 01, 2025

ಭಾರತ ಮತ್ತು ಪಾಕಿಸ್ತಾನ ಇಂದು ರಾಜತಾಂತ್ರಿಕ ಮಾರ್ಗಗಳ ಮೂಲಕ, ನವದೆಹಲಿ ಮತ್ತು ಇಸ್ಲಾಮಾಬಾದ್‌ನಲ್ಲಿ ಏಕಕಾಲದಲ್ಲಿ ಪರಸ್ಪರ ವಶದಲ್ಲಿರುವ ನಾಗರಿಕ ಕೈದಿಗಳು ಮತ್ತು ಮೀನುಗಾರರ ಪಟ್ಟಿಯನ್ನು ವಿನಿಮಯ ಮಾಡಿಕೊಂಡವು. ಕಾನ್ಸುಲರ್ ಪ್ರವೇಶ 2008 ಮೇಲಿನ ದ್ವಿಪಕ್ಷೀಯ ಒಪ್ಪಂದದ ನಿಬಂಧನೆಗಳ ಅಡಿಯಲ್ಲಿ, ಅಂತಹ ಪಟ್ಟಿಗಳನ್ನು ಪ್ರತಿ ವರ್ಷ 1ನೇ ಜನವರಿ ಮತ್ತು ಜುಲೈ 1 ರಂದು ವಿನಿಮಯ ಮಾಡಿಕೊಳ್ಳಲಾಗುತ್ತದೆ.

2. ಭಾರತವು ಪಾಕಿಸ್ತಾನಿ ಅಥವಾ ಪಾಕಿಸ್ತಾನಿಯರು ಎಂದು ನಂಬಲಾದ, ತನ್ನ ವಶದಲ್ಲಿರುವ 381 ನಾಗರಿಕ ಕೈದಿಗಳು ಮತ್ತು 81 ಮೀನುಗಾರರ ಹೆಸರನ್ನು ಹಂಚಿಕೊಂಡಿದೆ. ಅದೇ ರೀತಿ, ಪಾಕಿಸ್ತಾನವು ಭಾರತೀಯರ ಅಥವಾ ಭಾರತೀಯರು ಎಂದು ನಂಬಲಾದ ತನ್ನ ಕಸ್ಟಡಿಯಲ್ಲಿರುವ 49 ನಾಗರಿಕ ಕೈದಿಗಳು ಮತ್ತು 217 ಮೀನುಗಾರರ ಹೆಸರುಗಳನ್ನು ಹಂಚಿಕೊಂಡಿದೆ.

3. ಪಾಕಿಸ್ತಾನದ ವಶದಲ್ಲಿರುವ ನಾಗರಿಕ ಕೈದಿಗಳು, ಮೀನುಗಾರರು ಮತ್ತು ಅವರ ದೋಣಿಗಳು ಮತ್ತು ಕಾಣೆಯಾದ ಭಾರತೀಯ ರಕ್ಷಣಾ ಸಿಬ್ಬಂದಿಯನ್ನು ಶೀಘ್ರ ಬಿಡುಗಡೆ ಮಾಡುವಂತೆ ಮತ್ತು ವಾಪಸ್ ಕಳುಹಿಸುವಂತೆ ಭಾರತ ಸರ್ಕಾರ ಕರೆ ನೀಡಿದೆ. ಶಿಕ್ಷೆಯನ್ನು ಪೂರ್ಣಗೊಳಿಸಿದ 183 ಭಾರತೀಯ ಮೀನುಗಾರರು ಮತ್ತು ನಾಗರಿಕ ಕೈದಿಗಳ ಬಿಡುಗಡೆ ಮತ್ತು ವಾಪಸಾತಿಯನ್ನು ತ್ವರಿತಗೊಳಿಸುವಂತೆ ಪಾಕಿಸ್ತಾನವನ್ನು ಕೋರಲಾಗಿದೆ. ಹೆಚ್ಚುವರಿಯಾಗಿ, ಭಾರತೀಯರು ಎಂದು ನಂಬಲಾದ ಮತ್ತು ಇದುವರೆಗೆ ಕಾನ್ಸುಲರ್ ಪ್ರವೇಶವನ್ನು ಒದಗಿಸಿರದ, ಪಾಕಿಸ್ತಾನದ ವಶದಲ್ಲಿರುವ 18 ನಾಗರಿಕ ಕೈದಿಗಳು ಮತ್ತು ಮೀನುಗಾರರಿಗೆ ತಕ್ಷಣವೇ ಕಾನ್ಸುಲರ್ ಪ್ರವೇಶವನ್ನು ಒದಗಿಸುವಂತೆ ಪಾಕಿಸ್ತಾನವನ್ನು ಕೇಳಲಾಗಿದೆ.  ಎಲ್ಲಾ ಭಾರತೀಯ ಮತ್ತು ಭಾರತೀಯರು ಎಂದು ನಂಬಲಾದ, ಬಿಡುಗಡೆ ಮತ್ತು ಭಾರತಕ್ಕೆ ವಾಪಸಾತಿ ಬಾಕಿ ಉಳಿದಿರುವ ನಾಗರಿಕ ಕೈದಿಗಳು ಮತ್ತು ಮೀನುಗಾರರ ಸುರಕ್ಷತೆ, ಭದ್ರತೆ ಮತ್ತು ಕಲ್ಯಾಣವನ್ನು ಖಚಿತಪಡಿಸಿಕೊಳ್ಳಲು ಪಾಕಿಸ್ತಾನವನ್ನು ವಿನಂತಿಸಲಾಗಿದೆ.

4. ಪರಸ್ಪರರ ದೇಶದ ಕೈದಿಗಳು ಮತ್ತು ಮೀನುಗಾರರಿಗೆ ಸಂಬಂಧಿಸಿದ ಎಲ್ಲಾ ಮಾನವೀಯ ವಿಷಯಗಳನ್ನು ಆದ್ಯತೆಯ ಮೇಲೆ ಕೈಗೆತ್ತಿಕೊಳ್ಳಲು ಭಾರತ ಬದ್ಧವಾಗಿದೆ. ಈ ಸಂದರ್ಭದಲ್ಲಿ, ಭಾರತದ ವಶದಲ್ಲಿರುವ 76 ಪಾಕಿಸ್ತಾನಿ ನಾಗರಿಕ ಕೈದಿಗಳು ಮತ್ತು ಮೀನುಗಾರರ ರಾಷ್ಟ್ರೀಯತೆ ಪರಿಶೀಲನೆ ಪ್ರಕ್ರಿಯೆಯನ್ನು ತ್ವರಿತಗೊಳಿಸುವಂತೆ ಭಾರತವು ಪಾಕಿಸ್ತಾನವನ್ನು ಒತ್ತಾಯಿಸಿದೆ, ಅವರ ವಾಪಸಾತಿಯು ಪಾಕಿಸ್ತಾನದಿಂದ ರಾಷ್ಟ್ರೀಯತೆ ದೃಢೀಕರಣದ ಕೊರತೆಯಿಂದ ಬಾಕಿ ಉಳಿದಿದೆ.

5. ಸರ್ಕಾರದ ನಿರಂತರ ಪ್ರಯತ್ನಗಳ ಪರಿಣಾಮವಾಗಿ 2014 ರಿಂದ 2,639 ಭಾರತೀಯ ಮೀನುಗಾರರು ಮತ್ತು 71 ಭಾರತೀಯ ನಾಗರಿಕ ಕೈದಿಗಳನ್ನು ಪಾಕಿಸ್ತಾನದಿಂದ ವಾಪಸು ಕಳುಹಿಸಲಾಗಿದೆ.  ಇದರಲ್ಲಿ 2023 ರಿಂದ ಇಲ್ಲಿಯವರೆಗೆ ಪಾಕಿಸ್ತಾನದಿಂದ ವಾಪಸಾದ 478 ಭಾರತೀಯ ಮೀನುಗಾರರು ಮತ್ತು 13 ಭಾರತೀಯ ನಾಗರಿಕ ಕೈದಿಗಳು ಸೇರಿದ್ದಾರೆ.

ನವದೆಹಲಿ

ಜನವರಿ 01, 2025